ಮೈಸೂರ ಗೆಜಿಟ್.

ನಂ. 28 ಸರ್ಕಾರದಿಂದ ಫಾಯಿಷ್ ಆದ್ದು. ಸ್ 1887.

ಬೆಂಗಳೂರು, ಶನಿವಾರ, ಜುಲೈ ತಾ|| 16, ಸ್ 1887.

☞ ಈ ಭಾಗವನ್ನು ಪ್ರತ್ಯೇಕ ಸೇರಿಸಿ ಇಡುವ ಬಗ್ಗೆ ಇದಕ್ಕೆ ಬೇರೆಯಾಗಿ ಪುಟ ಸಂಖ್ಯೆ ಕೊಡಲ್ಪಡುತ್ತೆ.

ವಿಷಯ ಸೂಚಿಕೆ.

1ನೇ ಭಾಗ–ಮೈಸೂರು ಮಹಾರಾಜ ರಾಜಾಸಾಹೆಬ್ ಬಹದೂರವರ ದಿವಾನರವರಿಂದ ಕೊಡೋಣಾದ ಇಸ್ತಿಹಾರ್‌ನಾಮೆಗಳು.

2ನೇ ಭಾಗ–ರೆಸಿಡೆಂಟರು, ಚೀಫ್ ಜಡ್ಜೀಯವರು, ಸರ್ವೆ ವ ಇನಾಂ ಸೂಪರ್ಟಿಂಡೆಂಟರು, ಕಾಂಪ್ಟ್ರೋಲರವರು, ಪಬ್ಲಿಕ್ ವರ್ಕ್ಸ್ ಆಫೀಸರ್‌ಗಳು, ಫಾರೆಸ್ಟು ಇನ್‌ಸ್ಪೆಕ್ಟರ್ ಜನರಲ್‌ಯವರು, ರಿಜಿಸ್ಟ್ರೇರ್ ಇನ್‌ಸ್ಪೆಕ್ಟರ್ ಜನರಲ್ಲವರು, ಅಂಜೇ ಬಕ್ಷೀರು, ಮ್ಯುನಿಸಿಪೆಲ್ ಬೋರ್ಡು ಪ್ರಸಿಡೆಂಟರು, ಡಿಸ್ಟ್ರಿಕ್ಟು ವ ಸೆಷನ್ ಜಡ್ಜೀರು, ಡಿ|| ಡೆಪ್ಯೂಟೆ ಕಮ್ಮಿಷನರುಗಳು, ಸಬಾರ್ಡಿನೇಟ್ ಜಡ್ಜೀರು, ಪೋಲೀಸ್ ಸೂಪರ್ಟಿಂಡೆಂಟರು, ಫಾರೆಸ್ಟು ಆಫೀಸರ್‌ಗಳು, ಇವರುಗಳಿಂದ ಕೊಡೋಣಾದ ಇಸ್ತಿಹಾರ್‌ಗಳು ವಗೈರೆ; ಕಾಲಸ್ಥಿತಿ ರಿಪೋರ್ಟುಗಳು ; ಪೋಸ್ಟಾಫೀಸ್ ನೋಟೀಸುಗಳು.

3ನೇ ಭಾಗ–ಶ್ರೀಮ್ ಮಹಾರಾಜ ರಾಜಾಸಾಹೆಬ್ ಬಹದೂರವರಿಂದ ಮಂಜೂರ್ಮಾಡಲ್ಪಟ್ಟ ಆಕ್ಟುಗಳು ವ ರೆಗ್ಯುಲೇಷನ್‌ಗಳು, ಇಲ್ಲ.

4ನೇ ಭಾಗ–ಸರ್ಕಾರೀ ಕಾಗದ ಪತ್ರಗಳು—ಇಲ್ಲ.

1ನೇ ಭಾಗ.

ಶ್ರೀಮನ್ಮಹಾರಾಜ ರಾಜಾಸಾಹೆಬ್ ಬಹದೂರವರ ದಿವಾನರವರಿಂದ ಕೊಡೋಣಾದ ಇಸ್ತಿಹಾರ್‌ನಾಮೆಗಳು.

ಜನರಲ್.

ಇಸ್ತಿಹಾರ್‌ನಾಮೆಗಳು.

ತಾರೀಖು 5ನೇ ಜುಲೈ 1887.

ನಂ. 49.—ಫಾರೆಸ್ಟು ಅಸ್ಸಿಸ್ಟಂಟ್ ಮೆ|| ಬಿ. ಶ್ರೀನಿವಾಸರಾವ್‌ಯವರು, ಫಾರೆಸ್ಟ್ ಪ್ರೊಬೇಷನರ್ ದರ್ಜೆಗೆ ಬಡ್ತೀ ಮಾಡಲ್ಪಟ್ಟಿರುತ್ತಾರೆ.

ನಂ. 50.—ಬೆಂಗಳೂರು ಪೋಲೀಸ್ ಸೂಪರ್ಟಿಂಡೆಂಟ್ ಮೆ|| ಕುಪ್ಪಸಾಮಿಮೊದಲಿಯಾರ್ರು ಅವರು ವೈಪಯೋಗಿಸಿಕೊಳ್ಳುವ ತಾರೀಖು ಲಾಗಾಯಿತು ಒಂದು ತಿಂಗಳ ಪ್ರಿವಿಲೀಜ್ ರಜಾ ಕೊಡಲ್ಪಟ್ಟು ಯಿರುತ್ತಾರೆ.

ತಾರೀಖು 14ನೇ ಜುಲೈ 1887.

ನಂ. 57.—1879ನೇ ಇಸವಿ 1ನೇ ನಂಬರ್ ಸ್ಟ್ಯಾಂಪ್ ಆಕ್ಟಿನ 9ನೇ ಸೆಕ್ಷನ್ ಅನುಸರಿಸಿ, ಮೈಸೂರ ಶ್ರೀಮಂ ಮಹಾರಾಜಾ ಸರ್ಕಾರದವರು ಯಿದರ ದೆಶೆಯಿಂದ ಆಜ್ಞಾಪಿಸುವದೇನಂದರೆ ಸದರೀ ಆಕ್ಟಿನ 10ನೇ ಸೆಕ್ಷನ್ (a) ಕ್ಲಾಜ್ ಅನುಸರಿಸಿ ನೊಟೋರಿಯಲ್ ಆಕ್ಟ್ ಯಾನೆ ಕೆಲಸಗಳಿಗಾಗಿ ಸ್ಟ್ಯಾಂಪು ತೀರ್ವೆ ವಸೂಲೀ ಬಗ್ಯೆ "ನೊಟೋರಿಯಲ್" ಮಂಬದಾಗಿ ಮೇಲೆ ಭಾವಿಸಲ್ಪಟ್ಟಂಥಾ ವಂದು ರೂಪಾಯಿ ಕ್ರಯವುಳ್ಳ ಕೋರ್ಟು ಫೀ ಲೇಬಿಲ್ಲುಗಳು ಉಪಯೋಗಿಸಲ್ಪಡತಕ್ಕದ್ದು.

ತಾರೀಖು 7ನೇ ಜುಲೈ 1887.

ನಂ. 51.—ಚನ್ನರಾಯಪಟ್ಣ ತಾಲ್ಲೂಕು ಅಮಲ್ದಾರ್ ರಾಮಾನುಜಯ್ಯಂಗಾರ್‌ಗೆ, 1887ನೇ ಇಸವಿ ಜೂನ್ 23ನೇ ಮತ್ತು ಮಿನ 908ನೇ ನಂಬರ್ ಇಸ್ತಿಹಾರಿನಲ್ಲಿ ಕೊಡಲ್ಪಟ್ಟಿದ್ದ ರಜಾಕ್ಕೆ ಜಾಸ್ತಿಯಾಗಿ ಪೊಂಭತ್ತು ದಿವಸಗಳ ರಜಾ ಕೊಡಲ್ಪಟ್ಟು ಇದೆ.

ತಾರೀಖು 9ನೇ ಜೂನ್ 1887.

ಕ್ಯಾಂಪ್ ನಂ. 773.—ಇಂಡಿಯ ಗವರ್ಮೆಂಟಿನವರ ಇದರಡೀ ಕಂಡ ಇಸ್ತಿಹಾರ್‌ನಾಮೆಗಳು ಸರ್ವರ ತಿಳುವಳಿಕೆ ಬಗ್ಯೆ ಪ್ರಕಟಿಸಲ್ಪಟ್ಟಿರುತ್ತೆ:—

ತಾರೀಖು 13ನೇ ಏಪ್ರೆಲ್ 1887.

"ನಂ. 1652 I.—1882ನೇ ಇಸವಿ XIVನೇ ನಂಬರ್ ಆಕ್ಟು ಬೆಂಗಳೂರು ಸಿವಿಲ್ ಮಿಲಿಟೇರಿ ಸ್ಟೇಷನಿಗೆ ವಿಸ್ತರಿಸಲ್ಪಟ್ಟ ಪ್ರಕಾರ ಸದರೀ ಆಕ್ಟಿನಿಂದ ಉಂಟು ಮಾಡಲ್ಪಟ್ಟ ಅಧಿಕಾರಗಳನ್ನು ಚಲಾಯಿಸುವದರಲ್ಲಿ ಸಮಾಜದಲ್ಲಿನ ಗವರ್ನರ್‌ಜನರಲ್‌ಯವರು ನಿಯಮಿಸುವದೇನಂದರೆ, ಮೈಸೂರು ದೇಶದ ಸಿವಿಲ್ ಮತ್ತು ರೆವಿನ್ಯು ಕೋರ್ಟುಗಳ ಡಿಕ್ರಿಗಳು, ಬೆಂಗಳೂರು ಸಿವಿಲ್ ಮಿಲಿಟೇರಿ ಸ್ಟೇಷನಿನಲ್ಲಿ ಅವು ಸದರೀ ಸ್ಟೇಷನಿನ ಕೋರ್ಟುಗಳಿಂದ ಕೊಡಲ್ಪಟ್ಟ ಡಿಕ್ರಿಗಳಂತೆಯೇ ಅಮಲ್ದಾರಿ ನಡಿಸಲ್ಪಡಬಹುದು."

"ನಂ. 1,653 I.—1882ನೇ ಇಸವಿ XIVನೇ ನಂಬರ್ ಆಕ್ಟು ಸಿವಿಲ್ ಮಿಲಿಟೇರಿ ಸ್ಟೇಷನಿಗೆ ವಿಸ್ತರಿಸಲ್ಪಟ್ಟ ಪ್ರಕಾರ ಸದರೀ ಆಕ್ಟಿನ 650ನೇ A ಸೆಕ್ಷನಿನಿಂದ ಉಂಟುಮಾಡಲ್ಪಟ್ಟ ಅಧಿಕಾರಗಳನ್ನು ಚಲಾಯಿಸುವದರಲ್ಲಿ, ಸಮಾಜದಲ್ಲಿನ ಗವರ್ನರ್ ಜನರಲ್‌ಯವರು ವಿಧಿಸುವದೇನಂದರೆ, ಸದರಿ ಸೆಕ್ಷನಿನ ನಿಯಮಗಳು ಮೈಸೂರು ದೇಶದ ಸಿವಿಲ್ ಕೋರ್ಟುಗಳಿಗೆ ಲಗಾವಾಗತಕ್ಕದ್ದು."

ತಾರೀಖು 17ನೇ ಜೂನ್ 1887.

ನಂ. 38.—ಇದರಿಂದ ಸರ್ವರ ತಿಳುವಳಿಕೆ ಬಗ್ಯೆ ಪ್ರಕಟಿಸಲ್ಪಡುವದೇನಂದರೆ, ಮೈಸೂರು ದೇಶದ ಶ್ರೀಮಂ ಮಹಾರಾಜಾ ಸರ್ಕಾರದವರು ಆಜ್ಞಾಪಿಸುವದೇನಂದರೆ, ಮದರಾಸ್ ಪ್ರೆಸಿಡೆನ್ಸಿಯಲ್ಲಿರತಕ್ಕ ಭೂಸ್ಥಿತಿಗಳನ್ನು ಪರಭಾರೆ ಮಾಡುವ ಜನರು, ಯಾವ ರೂಲ್ಸ್ ಪ್ರಕಾರ ಅಂಥಾ ಭೂಸ್ಥಿತಿಗಳಿಗೆ ಸಂಬಂಧಪಟ್ಟ ದಸ್ತಾವೇಜುಗಳನ್ನ ರಿಜಿಸ್ಟ್ರೇಷ್ ಆಕ್ಟು ಅನುಸರಿಸಿ ರಿಜಿಸ್ಟ್ರು ಮಾಡುವ ಆಫೀಸರರ ಮುಖಾಂತ್ರ ಅಂಥಾ ಪರಭಾರೆಯ ರೆವಿನ್ಯೂ ರಿಜಿಸ್ಟ್ರಿಯನ್ನು ನಡಿಸಬಹುದೊ ಅಂಥಾ ರೂಲ್ಸ್‌ಯಾನೆ ನಿಬಂಧನೆಗಳು, ಮೈಸೂರು ದೇಶದಲ್ಲಿ 1887ನೇ ಇಸವಿ ಜೂನ್ 15ನೇ ಮುಕ್ತಂ ಮತ್ತು ಆತರ್ವಾಯದಲ್ಲಿ ಜಾರೀಲಿ ಬರತಕ್ಕದ್ದು.

2. ಸದರೀ ನಿಬಂಧನೆಯು, ಸ್ಥಳ ಸಂದರ್ಭಗಳನುಸರಿಸಿ ಅವಶ್ಯಕಗಳಾದ ಬದಲಾವಣೆಗಳೊಡನೆ ಇದರಡೀ ಕಂಡ ಪ್ರಕಾರ ಯಿರತಕ್ಕನ್ನು:—

(1) ರಿಜಿಸ್ಟ್ರೇಷ್ ಆಫೀಸಿನಲ್ಲಿ ರಿಜಿಸ್ಟ್ರು ಬಗ್ಯೆ ಹಾಜರಾಗುವಂಥಾ ಕ್ರಯಪತ್ರದ ಮೂಲಕವಾದರೂ ಯಾ ಮತ್ಯಾವ ತರಹೆಯ ದಸ್ತಾವೇಜಿನ ದೆಶೆಯಿಂದಲಾದರೂ ಭೂಸ್ಥಿತಿಯು ಶುದ್ಧವಾಗಿ ಪರಭಾರೆ ಯಾ ಅದರ ಸ್ವಾಧೀನ ವರ್ಗ ಮಾಡಲ್ಪಡುವ ಪ್ರತಿ ಸಂದರ್ಭದಲ್ಲೂ ಅಂಥಾ ದಸ್ತಾವೇಜನ್ನ ರಿಜಿಸ್ಟ್ರು ಮಾಡುವದಕ್ಕೆ ಮುಂಚಿತವಾಗಿ ರೆಜಿಸ್ಟ್ರಾರ್ ಯಾ ಸಬ್ ರೆಜಿಸ್ಟ್ರಾರ್ರು ಸದರೀ ದಸ್ತಾವೇಜಿಗೆ ಸಂಬಂಧಪಟ್ಟ ಜನರನ್ನು ಹಾಂಗೆ ಪರಭಾರೆ ಯಾ ವರ್ಗಮಾಡಲ್ಪಟ್ಟ ಜಮೀನಿನ ರೆವಿನ್ಯೂ ರಿಜಿಸ್ಟ್ರಿಯನ್ನು ವರ್ಗಾಯಿಸುವದಕ್ಕೆ ಸಮ್ಮತಿ ಉಂಟೆ ಯಂಬುದಾಗಿ ವಿಚಾರಿಸತಕ್ಕದ್ದು; ಅವರು ಸಂಮತಿಪಟ್ಟರೆ, ರಿಜಿಸ್ಟ್ರಿಂಗ್ ಆಫೀಸರರು ದಸ್ತಾವೇಜನ್ನ ರಿಜಿಸ್ಟ್ರು ಮಾಡಿದ ತರುವಾಯ ಆವರಿಂದ ತಮ್ಮ ರೂಬರು ಇದರಡೀ ಕಂಡ ನಮೂನೆಯಲ್ಲಿ ರೆವಿನ್ಯೂ ಇಲಾಖೆಗೆ ವಂದು ಅರ್ಜಿಯನ್ನು ಬರೆಯಿಸಿ ಇದನ್ನ ಸದರೀ ಭೂಮಿ ಯಿರತಕ್ಕಂಥಾ ತಾಲ್ಲೂಕು ಅಮಲ್ದಾರರಿಗೆ ಕಳುಹಿಸತಕ್ಕದ್ದು. ಅಮಲ್ದಾರರು ಸದರೀ ಅರ್ಜಿಯನ್ನು ಅದು ತಮ್ಮ ರೂಬರು ಕಕ್ಷಿಗಾರರಿಂದ ಹಾಜರ್ಮಾಡಲ್ಪಟ್ಟಿದ್ದರೆ ಹ್ಯಾಗೋ ಹಾಗೆ ಕಕ್ಷಿಗಾರರು ಸಮ್ಮತಿಪಟ್ಟಿರುವಂತೆ ಅಂಗೀಕರಿಸಿ, ನಮೂದು ಮಾಡಲ್ಪಟ್ಟ ಹಿಡುವಳಿಯ ತಪಸೀಲು ಕರಾರುವಾಕಾ ಯಿರುವಷ್ಟರ ಮಟ್ಟಿಗೆ ಕೂಲ್ಲೆ ಜಾರೀ ಮಾಡತಕ್ಕದ್ದು.

ಅರ್ಜೀ ನಮೂನೆ.

" ದಲ್ಲಿ ವಾಸವಾಗಿರುವ ಯಂಬುವನ

ಮಗನಾದ ಯಿ. ಬಿ. ಯಂಬ ನಾನು ಇದರಡೀ ಕಂಡ ತಖ್ತೀಯಲ್ಲಿ ನಮೂದಾಗುವ ಮತ್ತು ನನ್ನ ಹೆಸರಿನಲ್ಲಿ ರಿಜಿಸ್ಟ್ರು

ಮಾಡಲ್ಪಟ್ಟಿರುವ ಜಮೀನಿನ ರೆವಿನ್ಯೂ-ರಿಜಿಸ್ಟ್ರಿಯನ್ನು ಸ್ಥಳದಲ್ಲಿ ವಾಸಮಾಡುವ
ನ ಮಗನಾದ ಸಿ. ಡಿ. ಯಂಬುವನ ಹೆಸರಿಗೆ ವರ್ಗ ಮಾಡಬಹುದೆಂಬದಾಗಿ ಪ್ರಾರ್ಥಿಸುತ್ತೇನೆ.

ರುಜು. ಯೆ. ಬಿ.

" ಮೇಲೆಕಂಡ ಸಿ. ಡಿ. ಯಂಬ ನಾನು, ಸದರೀ ತಖ್ತೇಯಲ್ಲಿ ಕಂಡ ಜಮೀನುಗಳ ರೆವಿನ್ಯು ರಿಜಿಸ್ಟ್ರಿಯು ನನ್ನ ಹೆಸರಿಗೆ ವರ್ಗ ಮಾಡಲ್ಪಡುವ ಬಗ್ಯೆ ಒಪ್ಪಿ ಯಿರುತ್ತೇನೆ.

ರುಜು ಸಿ. ಡಿ.

ತಖ್ತೆ.

ತಾಲ್ಲೂಕು.	ಹೋಬಳಿ.	ಗ್ರಾಮ.	ಸರ್ವೇ ನಂಬರ್.	ಹಿಸ್ಸಾ ನಂಬರ್.	ಮಿಸ್ಲಾನಿಯೇ ಅಷ್ಟಾಣಿ ಅಥವಾ ಕಾಣೀಯೇ.	ಬೀಜವಾರಿ.	ಜಮಾಬಂದಿ.
1	2	3	4	5	6	7	8

ನನ್ನ ರೂಬರೂ ಬರೆಯಲ್ಪಟ್ಟಿತು.

ರುಜು.

ರೆಜಿಸ್ಟ್ರಾರ್ ಅಥವಾ ಸಬ್ ರೆಜಿಸ್ಟ್ರಾರ್
(ಸಂದರ್ಭಾನುಸಾರ.)

ಮೊಕ್ತಾಂ
ತಾರೀಖು.

(2) ಸರ್ವೇ ನಂಬರು ಯಿಲ್ಲದಂಥಾ ಜಮೀನುಗಳ ವಿಷಯದಲ್ಲಿಯೂ ಹಾಂಗೂ ಇನಾಂ ಗ್ರಾಮಗಳು ಮುಂತಾದ ವಿಷಯದಲ್ಲಿಯೂ ಜಮೀನು ರಿಜಿಸ್ಟ್ರಿ ಮಾಡಲ್ಪಟ್ಟ ದಸ್ತಾವೇಜಿನ ಪ್ರಕಾರ ಚಕ್ಕು ಬಂದಿ ಮೂಲಕ ವಿವರಿಸಲ್ಪಡತಕ್ಕದ್ದು; ಮತ್ತು ತಖ್ತೇಯಲ್ಲಿ ಕಂಡ ತಮಾಂ ತಪಶೀಲ್‌ಗಳನ್ನೂ ವದಗಿಸುವದಕ್ಕೆ ಕಕ್ಷಿಗಾರರು ಅಸಮರ್ಥರಾಗಿರುವ ಸಬುಬಿನ ಮೇಲೆ ಸದರೀ ಅರ್ಜಿಯನ್ನು ಬರಸದೆ ಯಿರಕೂಡದು, ಪರಂತು ಜಮೀನುಗಳು ಫಲಾನೇವೆಂದು ಗೊತ್ತು ಮಾಡಲ್ಪಡುವ ಬಗ್ಯೆ ಸಾಕಾದ ಸಂಗತಿಗಳು ನಮೂದ್ ಮಾಡಿದರೆ ಸಾಕಾಗಿರುತ್ತೆ.

(3) ದಾಖಲೆ ಬಗ್ಯಾಗಿ, ರಿಜಿಸ್ಟ್ರಿಂಗ್ ಆಫೀಸರರು, ಪ್ರತಿ ಅರ್ಜಿಯ ಮೇಲೂ ಅದರಲ್ಲಿ ನಮೂದ್ ಮಾಡೋಣಾದ ದಸ್ತಾವೇಜು ರಿಜಿಸ್ಟ್ರಿ ಮಾಡಲ್ಪಟ್ಟ ರಿಜಿಸ್ಟರ್ ಬುಕ್ಕಿನ ಸಂಪುಟ ಮತ್ತು ಪುಟಗಳ ಸಂಖೆಯನ್ನು ನಮೂದಿಸತಕ್ಕದ್ದು.

ತಾರೀಖು 2ನೇ ಜುಲೈ 1887.

ನಂ. 47.—ಸಕಲಜನಗಳಿಗೂ ತಿಳಿಯುವ ಬಗ್ಯೆ ಇದರಿಂದ ಪ್ರಕಟಿಸಲ್ಪಡುವದೇನಂದರೆ, (ಇದರಡೀ ಕಂಡ ತಖ್ತೇಯಲ್ಲಿ ನಮೂದಿಸಿದ ಪ್ರಕಾರ) ಜೋಡೀದಾರರಿಂದ ಸರಕಾರಕ್ಕೆ ಸಲ್ಲತಕ್ಕ ಕಂದಾಯದ ಬಾಕೀ ಸಮಾಧಾನಕ್ಕೋಸ್ಕರ ಕ್ರಮ ಪ್ರಕಾರ ಜಪ್ತೀಮಾಡಲ್ಪಟ್ಟಿರುವ ಈ ಕೆಳಗೆ ಕಂಡ ಜೋಡಿ ಗ್ರಾಮವು ಇದರಡೀಕಂಡ ತಖ್ತೇಯಲ್ಲಿ ನಮೂದಿರುವ ಸ್ಥಳದಲ್ಲೂ ವ ತಾರೀಖಿನಲ್ಲೂ ಬಹಿರಂಗವಾದ ಹರಾಜು ಮೂಲಕ ವಿಕ್ರಯಿಸಲ್ಪಡುವದು; ಮತ್ತು ಸದರೀ ತಾರೀಖಿನಲ್ಲಿ ಬೆಳ್ಗೆ 11 ಘಂಟೆಗೆ ಹರಾಜು ಪುರುವಾಗಿ ಉಳಿಕೆ ಯಾವದೂ ಇಲ್ಲದೆ ಗ್ರಾಮವು ಚಡ ದರಖಾಸ್ತುದಾರರಿಗೆ ಹರಾಜು ನಿಲ್ಲುವದು.

2. ಪರಂತು, ಬಂದು ಗ್ರಾಮವು ಬೇರೆಬೇರೆಯಾಗಿ ಮಂಜೂರ್ಮಾಡಲ್ಪಟ್ಟ ವೃತ್ತಿಗಳಾಗಿ ವಿಂಗಡಿಸಲ್ಪಟ್ಟಿದ್ದರೆ, ಡೆಪ್ಯೂಟಿ ಕಮ್ಮಿಷ್ಣರವರು ತಮ್ಮ ಯಖ್ತ್ಯಾರೀ ಮೇಲೆ ಪೂರಾ ಗ್ರಾಮವನ್ನು ವಿಕ್ರಯಿಸುವದಕ್ಕೆ ಬದಲಾಗಿ ಪ್ರತಿ ಬಂದು ವೃತ್ತಿಯನ್ನೂ ಬೇರೆಬೇರೆಯಾಗಿ ಹರಾಜ್ ಹಾಕಿಸುವರು.